ಆ) ಈ ಕುರಿತು ಮಾಧ್ಯಮಿಕ ಶಿಕ್ಷಣ ಹಂತದಲ್ಲಿ ಯೋಗ ಶಿಕ್ಷಣ ಪಠ್ಯ ಕ್ರಮವನ್ನು (ಸಿಲಬಸ್) ರಚಿಸಲು ಸರ್ಕಾರವು ತಜ್ಞರ ಸಮಿತಿ ರಚಿಸಿರುವುದು ನಿಜವೇ ?

ಇ) ಹಾಗಿದ್ದಲ್ಲಿ ಈ ತಜ್ಞರ ಸಮಿತಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದೆಯೇ ಮತ್ತು ಸಮಿತಿಯ ಶಿಫಾರಸ್ಸಿನ ಪ್ರಕಾರ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ ?

ಶ್ರೀ ಎಂ. ವೀರಪ್ಪ ಮೊಯಿಲಿ :– (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು)

ಅ) ಹೌದು.

ಆ) ಸಮನ್ವಯ ಸಮಿತಿ ರಚಿಸಲಾಗಿದೆ. ಈ ಸಮಿತಿಗೆ ಅಧ್ಯಕ್ಷರನ್ನು ಇನ್ನು ನೇಮಿಸಲಾಗಿಲ್ಲ. ಅಧ್ಯಕ್ಷರ ಹೆಸರನ್ನು ಸೂಚಿಸಲು ಸಾರ್ವಜನಿಕ ಶಿಕ್ಷಣ ಆಯುಕ್ತರನ್ನು ಕೋರಲಾಗಿದೆ.

ಇ) ಉದ್ಭವಿಸುವುದಿಲ್ಲ.

ವಿಷಯ :– ವಾಣಿಜ್ಯ ವಿದ್ಯಾ ಸಂಸ್ಥೆಗಳನ್ನು ತೆರೆಯಲು ನಿಯಮಾವಳಿಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 240 (917)

ಶ್ರೀ ಕೆ. ಎಂ. ಪುಟ್ಟು (ಕಿರುಗಾವಲು) :– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಾಣಿಜ್ಯ ಸಂಸ್ಥೆಗಳನ್ನು ಅಂದರೆ ಶೀಘ್ರಲಿಪಿ ಮತ್ತು ಬೆರಳಚ್ಚು ಬೋಧನಾ ಸಂಸ್ಥೆಗಳನ್ನು ತೆರೆಯಲು ಇರತಕ್ಕಂಥ ನಿಯಮಾವಳಿಗಳೇನು ? (ಅದರ ಒಂದು ಪ್ರತಿಯನ್ನು ಒದಗಿಸುವುದು).

ಆ) ಇವನ್ನು ಯಾವಾಗ ರಚನೆ ಮಾಡಲಾಯಿತು ? ಹಾಗೂ ಇದರಲ್ಲಿ ಯಾವುದಾದರೂ ಸುಧಾರಣೆಗಳನ್ನು ಮಾಡುವ ಬಗ್ಗೆ ಸರ್ಕಾರ ಆಲೋಚನೆ ಮಾಡುತ್ತಿದೆಯೇ ?

ಇ) ವಾಣಿಜ್ಯ ವಿದ್ಯಾ ಶಾಲೆಗಳನ್ನು ಸ್ಥಾಪಿಸಲು ಈಗ ಇರುವ ಅಂತರದ ಮಿತಿಯನ್ನು (ದೂರದ) ಸಡಿಲಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಈ) ನಿರುದ್ಯೋಗಿ ವಿದ್ಯಾವಂತರು ವಾಣಿಜ್ಯ ವಿದ್ಯಾ ಶಾಲೆಗಳನ್ನು ತೆರೆಯಲು ಮುಂಚೆ ಬಂದಲ್ಲಿ ಸರ್ಕಾರ ಸಹಾಯಧನವನ್ನೇನಾದರೂ ನೀಡುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :–

ಅ) ವಾಣಿಜ್ಯ ಶಿಕ್ಷಣ ನಿಯಮಾವಳಿಯ ಪ್ರತಿಯನ್ನು ಲಗತ್ತಿಸಲಾಗಿದೆ.

(ಸಂಬಂಧಪಟ್ಟ ಸದಸ್ಯರಿಗೆ ಒಂದು ಪ್ರತಿಯನ್ನು ಲಗತ್ತಿಸಿದೆ).

ಆ) ದಿನಾಂಕ 3–9–75 ರಲ್ಲಿ ರಚನೆ ಮಾಡಲ್ಪಾಯಿತು.

ಇ) ಇಲ್ಲ.

ಈ) ಇಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ವೀರಪ್ಪ ಮೊಯಿಲಿ :– ಮಾನ್ಯ ಅಧ್ಯಕ್ಷರೇ, ಹದಿಮೂರನೆಯ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇನೆ.

ವಿಷಯ :– ಮುಳಬಾಗಲು ತಾಲ್ಲೂಕಿನಲ್ಲಿ ಖಾಸಗೀ ಕರಿಯ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 574 (695)

ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) :– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಳಬಾಗಿಲು ತಾಲ್ಲೂಕಿನಲ್ಲಿ ಖಾಸಗೀ ಕಿರಿಯ ಕಾಲೇಜುಗಳನ್ನು ತೆರೆಯಲು ಅನುಮತಿ ಕೋರಿ ಬಂದಿರುವ ಅರ್ಜಿಗಳೆಷ್ಟು ? ಹಾಗೂ ಸದರಿ ಅರ್ಜಿಗಳ ಬಗ್ಗೆ ಕೈಗೊಂಡ ತೀರ್ಮಾನವೇನು ?

ಆ) ಮುಳಬಾಗಿಲು ತಾಲ್ಲೂಕಿನ ಉತ್ತನೂರು ವಿದ್ಯಾಸಂಸ್ಥೆ ಕಿರಿಯ ಕಾಲೇಜು ತೆರೆಯಲು ಅನುಮತಿಗಾಗಿ ಅರ್ಜಿ ಯಾವಾಗ ಸಲ್ಲಿಸಲಾಗಿದೆ ?

ಇ) ಸಲ್ಲಿಸಿದ್ದಲ್ಲಿ, ಅನುಮತಿಯನ್ನು ನೀಡಲು ವಿಳಂಬವಾಗಲು ಕಾರಣಗಳೇನು ?

ಈ) ಯಾವಾಗ ಮಂಜೂರಾತಿ ನೀಡಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :-

ಅ) ಒಂದು ಅರ್ಜಿ ಬಂದಿರುತ್ತದೆ. ಆಯುಕ್ತರಿಂದ ವರದಿ ಬಂದಿಲ್ಲ.

ಆ) ದಿನಾಂಕ 23-5-89 ರಲ್ಲಿ ಬಂದಿದೆ.

ಇ) ಆಯುಕ್ತರಿಂದ ವರದಿ ಬರದಿದ್ದ ಕಾರಣ.

ಈ) ವರದಿ ಬಂದ ನಂತರ ಪರಿಶೀಲಿಸಲಾಗುವುದು.

ವಿಷಯ :- ಗುತ್ತಿಗೆ ಶಿಕ್ಷಕರ ಖಾಯಂಮಾತಿ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 574 (1292)

ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) :- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಏಳು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಗುತ್ತಿಗೆ ಶಿಕ್ಷಕರನ್ನು ದಿನಾಂಕ 13-7-90 ರಂದು ಖಾಯಂ ಗೊಳಿಸಿರುವುದು ನಿಜವಲ್ಲವೆ ?

ಆ) ಈಗ ಖಾಯಂ ಆಗುತ್ತಿರುವ ಉಪನ್ಯಾಸಕರ ಶಿಕ್ಷಕರ ಹುದ್ದೆಗಳೆಷ್ಟು ? ವಿಷಯಾನುಕ್ರಮದಲ್ಲಿ ತಿಳಿಸುವುದು.

ಇ) 1990 ಮಾರ್ಚ್ 19 ರಂದು ಸದನದಲ್ಲಿ ಮಾನ್ಯ ಸಚಿವರು 60 ದಿನಗಳೊಳಗೆ ಖಾಯಂ ಗೊಳಿಸುವ ಆಶ್ವಾಸನೆ ನೀಡಿದ್ದರು ಈ ಆಶ್ವಾಸನೆಯನ್ನು ಇದುವರೆವಿಗೂ ಈಡೇರಿಸದಿರಲು ಕಾರಣಗಳೇನು?

ಈ) ಹಾಗಿದ್ದಲ್ಲಿ ಎಷ್ಟು ದಿನಗಳಲ್ಲಿ ಸರ್ಕಾರಿ ಆಜ್ಞೆ ಹೊರಡಿಸಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :-

ಅ) ಖಾಯಂ ಗೊಳಿಸಿದ ಆದೇಶವನ್ನು ದಿನಾಂಕ 13-7-89 ರಂದು ಹೊರಡಿಸಲಾಗಿದೆ.

ಆ) ಮೇಲಿನ ಆದೇಶದಲ್ಲಿ ಈ ಕೆಳಕಂಡ ಕಾಂಟ್ರಾಕ್ಟ್ ಹುದ್ದೆಗಳನ್ನು ಖಾಯಂ ಗೊಳಿಸಲು ಆದೇಶಿಸಲಾಗಿದೆ.

1) ಪ್ರಾಥಮಿಕ ಶಾಲಾ ಶಿಕ್ಷಕರು — 3726.

2) ಪ್ರೌಢ ಶಾಲಾ ಶಿಕ್ಷಕರು — 3665.

3) ಕಿರಿಯ ಕಾಲೇಜು ಉಪನ್ಯಾಸಕರು — 839.

4) ಪ್ರಥಮ ದರ್ಜೆ ಕಾಲೇಜು ಉಪನ್ಯಾಸಕರು — 517.

5) ತಾಂತ್ರಿಕ ಶಿಕ್ಷಣ ಉಪನ್ಯಾಸಕರು — 184.

ಇ),ಈ) ಗುತ್ತಿಗೆ ಶಿಕ್ಷಕರ ಸೇವೆಯನ್ನು ಸಕ್ರಮಗೊಳಿಸುವುದಕ್ಕೆ ವಿಶೇಷ ನಿಯಮಗಳನ್ನು ತಯಾರು ಮಾಡಲಾಗುತ್ತಿದೆ. ಅವರ ಸೇವೆಯನ್ನು ಸಕ್ರಮಗೊಳಿಸಲು ನಿಯಮಗಳನ್ನು ರೂಪಿಸಿದ ನಂತರ ಸಾಧ್ಯವಾದಷ್ಟು ಬೇಗ ಸಕ್ರಮಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.